1-30 P.M.

Sri K. PUTTASWAMY.—The hon'ble Member feels that it is an illegal order. The District Judge has held that it is legal. The matter is pending before the High Court. At this stage, I cannot agree with the hon'ble Member that it is an illegal order. Now that Government have issued instructions, the Deputy Labour Commissioner will go on with the elections, provided the office bearers of the Association give him all facilities and assistance.

Upgrading of Hospital at Chamarajanagar

662. Sri S. PUTTASWAMY (Chamarajanagar).—

Will the Minister for Health be pleased to state :—

(*a*) whether there is any proposal before the Government to upgrade taluk level hospitals into General hospital in Mysore District ;

(*b*) whether they have received any representation from Chamarajanagar taluk to upgrade the existing hospital into a general hospital ;

(*c*) whether both Taluk Development Board, Chamarajanagar and Municipal Council, Chamarajanagar, have agreed by passing resolutions to contribute the required percentage of the cost of the envisaged General Hospital Scheme of the Government ;

(*d*) if so, the reasons for not according sanction to upgrade the existing hospital at Chamarajanagar into a general hospital ?

Sri Y. RAMAKRISHNA (Minister for Health).—

(*a*) No.

(*b*) Yes.

(*c*) Only Taluk Development Board, Chamarajanagar, has passed the necessary resolution agreeing to pay the contribution as required. Similar resolution ageeing to pay the required contibution is yet to be received from the Town Municipal Council, Chamarajanagar.

(*d*) For want of the necessary resolution from the Town Municipal Council, Chamarajanagar agreeing to pay its share.

ಶ್ರೀ ಎಂ. ಬಸವರಾಜು.—(ಈ) ಪ್ರಶ್ನೆಗೆ ಉತ್ತರವಾಗಿ ತಮ್ಮ ಪಾಲಿನ ವಂತಿಗೆಯನ್ನು ಕೊಡಲು ಒಪ್ಪಿಕೊಳ್ಳುವ ಅವಶ್ಯಕ ನಿರ್ಣಯವು ಚಾಮರಾಜನಗರ ಪುರಸಭೆಯವರಿಂದ ಬರದೇ ಇರುವುದು ಎಂದು ಇದೆ. ಇದು ಒಂದೇ ಕಾರಣವಾಗಿದ್ದರೆ—ನಾನು ತಿಳಿದಮಟ್ಟಿಗೆ ಆಗಲೇ ಒಂದು ರೆಸಲ್ಯೂಷನ್ ಮಾಡಿ ಕಳುಹಿಸಿಕೊಟ್ಟಿದ್ದಾರೆ ಎಂದು ಕೇಳಿದೆ. ಅಕಸ್ಮಾತ್ತಾಗಿ ಬರದಿದ್ದರೆ ಮುನಿಸಿಪಾಲಿಟಿಯವರು ಒಪ್ಪಿಗೆ ಕೊಟ್ಟಿದ್ದಾರೆ ಎಂದು ತಿಳಿದುಕೊಂಡು 69ನೇ ಸಾಲನಲ್ಲಿ ಮಾಡುತ್ತೀರಾ ?

† ಶ್ರೀ ಪೆ. ರಾಮಕೃಷ್ಣ.—ರೆಸಲ್ಯೂಷನ್ ಮಾಡುವುದಾದರೆ ಒಪ್ಪಿಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ನಾನೇ ಪ್ಲಾನ್‌ನಲ್ಲಿ ತಾಲ್ಲೂಕು ಮಟ್ಟದಲ್ಲಿ ಇರುವಂತಹ ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡುವಂತ ಒಂದು ಪಾಲಸಿಯನ್ನು ಸರ್ಕಾರದವರು ತಿಳಿಸಿಕೊಂಡಿದ್ದು ನಿಜವೇ ?

ಶ್ರೀ ಪೈ. ರಾಮಕೃಷ್ಣ.—ಹೌದು.

Improvement of Agricultural Families in the State

792. Sri B. GANGANNA (Kallambella).—

Will the Minister for Agriculture be pleased to state :—

(*a*) whether the Government has any proposal to appoint a Commission to study and report ways and means for the improvement of agricultural families in the State ;

(*b*) if so, whether the Government has advised the Commission to prepare a phased programme required for the improvement of agricultural families in the State ?

Sri B. RACHAIAH (Minister for Agriculture).—

(*a*) No.

(*b*) Does not arise.

ಶ್ರೀ ಬಿ. ಗಂಗಣ್ಣ.—ತಮ್ಮ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೀರಿ, ಅಂತಹ ಒಂದು ಕಮಿಷನ್ ರೈತರ ಕುಟುಂಬದ ಎರ್ಲಾ ವಿಧವಾದ ಏಳಿಗೆಗೆ ಅವಶ್ಯಕ ಎಂದು ಎಂದೋ ಮನಗಾಣಬೇಕಾಗಿತ್ತು. ಇದುವರೆಗೂ ಬಿಟ್ಟಂಥದ್ದೇ ಒಂದು ದೊಡ್ಡ ಅಪರಾಧ ಅಂತ ಪರಿಗಣಿಸಿ ಈಗಲಾದರೂ ಒಂದು ಕಮಿಷನ್ ಏರ್ಪಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಕೇಂದ್ರ ಸರ್ಕಾರದವರು ಇಂಥಾ ಒಂದು ಕಮಿಷನ್ ಮಾಡತಕ್ಕ ಉದ್ದೇಶ ಇಟ್ಟುಕೊಂಡಿದ್ದಾರೆ, ಅವರು ನಮ್ಮ ಅಭಿಪ್ರಾಯವನ್ನು ಕೇಳಿದ್ದರು—ಅದರಲ್ಲಿ ಟರ್ಮ್ಸ್ ಆಫ್ ರೆಫರೆನ್ಸ್ ಏನು ಹಾಕಬೇಕೆಂದು ಕೇಳಿದ್ದರು, ಅದನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಗಂಗಣ್ಣ.—ತಾವು ಕೊಟ್ಟ ಅಭಿಪ್ರಾಯದಲ್ಲಿ ಇಷ್ಟು ವರ್ಷಗಳಲ್ಲಿ ರೈತ ಕುಟುಂಬದ ವರ ಅಭಿವೃದ್ಧಿಯಾಗಬೇಕು ಎಂಬ ನಿರ್ದಿಷ್ಟವಾದ ಒಂದು ಯೋಜನೆಯನ್ನೇನಾದರೂ ಕೊಟ್ಟಿದ್ದೀರಾ ?

ಶ್ರೀ ಬಿ. ರಾಚಯ್ಯ.— ಆ ರೀತಿ ಅಲ್ಲ. ರೈತರಿಗೆ ಏನು ತೊಂದರೆ ಇದೆ, ಇವತ್ತು ಅವರಿಗೆ ಸಾಲ ಕೊಡುವುದರಲ್ಲಿ ಅವರಿಗೆ ಬೇಕಾಗಿರತಕ್ಕ ವಿದ್ಯುಚ್ಛಕ್ತಿ ಸಹಾಯವನ್ನು ಒದಗಿಸುವುದರಲ್ಲಿ ಮತ್ತು ವ್ಯವಸಾಯದ ಉಪಕರಣಗಳನ್ನು ಅವರು ಪಡೆಯುವುದರಲ್ಲಿ ಮತ್ತು ಇದನ್ನೆಲ್ಲಾ ಪಡೆದ ಮೇಲೆ ಅವರು ಏನು ಬೆಳೆಯುತ್ತಾರೆ ಆ ಬೆಳೆಗೆ ಏನು ಒಂದು ನಿಗದಿಯಾದ ಬೆಲೆಯನ್ನು ಗೊತ್ತು ಮಾಡಬೇಕೆಂಬ ವಿಷಯವನ್ನು ಕುರಿತು ಅವರು ನಮ್ಮ ಅಭಿಪ್ರಾಯವನ್ನು ಕೇಳಿದ್ದರು, ಅದನ್ನು ಅವರಿಗೆ ಕೊಟ್ಟಿದೆ.

ಶ್ರೀ ಎನ್. ಎ. ಚನ್ನೇಗೌಡ.—ರೈತರ ಸ್ಥಿತಿಗತಿಗಳನ್ನು ಉತ್ತಮಗೊಳಿಸಬೇಕೆಂಬುದು ಸರ್ಕಾರದ ಗಮನಕ್ಕೆ ಬರುವುದು ಬರೀ ಎಲೆಕ್ಷನ್ ಸಮಯದಲ್ಲಿ ಮಾತ್ರವೇ ?

ಶ್ರೀ ಬಿ. ರಾಚಯ್ಯ.—ಈಗ ಏನೂ ಎಲೆಕ್ಷನ್ ನಡೆಯುತ್ತಿಲ್ಲ. ಈಗಲೂ ರೈತರ ಸ್ಥಿತಿಗತಿಗಳನ್ನು ನೋಡುತ್ತಾ ಇದ್ದೇವೆ ಮತ್ತು ಅವರಿಗೆ ಏನು ಕೆಲಸ ಕಾರ್ಯ ಮಾಡಬೇಕೋ ಅದನ್ನು ಮಾಡುತ್ತಾ ಇದ್ದೇವೆ.